**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 239/2023**

| | | | |
|---|---|---|---|
| ಹೆಸರು | : | ರಮೇಶ | ಚಾಸಾ. 4 |
| ತಂದೆಯ ಹೆಸರು | : | ಬಸಲಿಂಗ | ಪ್ರಾ.ಸಾ. 4 |
| ವಯಸ್ಸು | : | 46 ವರ್ಷ | ದಿನಾಂಕಃ 20-08-2025 |
| ಉದ್ಯೋಗ | : | ಮುಖ್ಯಪೇದೆ | |
| ವಾಸಸ್ಥಳ | : | ಮಿರಿಯಾಣ | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಸೆಪ್ಟೆಂಬರ 2022 ರಿಂದ 2024 ವರೆಗೆ ಚಿಂಚೋಳಿಯಲ್ಲಿ ಮುಖ್ಯಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 30-12-2022 ರಂದು ಮಧ್ಯಾಹ್ನ 2 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1 ಮತ್ತು 6ರವರು ನಮ್ಮ ಠಾಣೆಗೆ ಹಾಜರಾಗಿ ಸೇರಿ ಕ್ರಾಸ ಬಸ್ ನಿಲ್ದಾಣ ಹಿಂದೆ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಭಾತ್ಮಿ ಬಂದಿದೆ ಎಂದು ತಿಳಿಸಿ ದಾಳಿಗಾಗಿ ಜೊತೆಯಲ್ಲಿ ಬರಲು ತಿಳಿಸಿದರು. ನಂತರ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡ ಮೇರೆಗೆ ನಾನು, ಸಿಬ್ಬಂದಿಯಾದ ಚಾಸಾ-1, 5 ಮತ್ತು 6 ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ ಮಧ್ಯಾಹ್ನ 2-45 ಗಂಟೆ ಸುಮಾರಿಗೆ ಠಾಣಯಿಂದ ಹೊರಟು ಮಧ್ಯಾಹ್ನ 3-15 ಗಂಟೆ ಸುಮಾರಿಗೆ ಭಾತ್ಮಿ ಸ್ಥಳದಲ್ಲಿ ಮರೆಯಲ್ಲಿ ನಿಂತು ನೋಡಿದಾಗ ಸೇರಿ ಕ್ರಾಸ ಬಸ ನಿಲ್ದಾಣದ ಹಿಂದೆ ಒಬ್ಬ ವ್ಯಕ್ತಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದು ಅವನ ಮೇಲೆ ಸಿಬ್ಬಂದಿಯೊಂದಿಗೆ ಪಂಚರ ಸಮಕ್ಷಮ ದಾಳಿ ಮಾಡಿ ಅವನ ಹೆಸರು ವಿಚಾರಿಸಿದಾಗ ತನ್ನ ಹೆಸರು ಅರವಿಂದ ತಂದೆ ಮಾಣಿಕ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ.

ಅವನ ಮುಂದೆ ಇಟ್ಟುಕೊಂಡ ಸೇಂದಿಯನ್ನು ಪರಿಶೀಲಿಸಿದಾಗ ಅಲ್ಲಿ 15 ಲೀಟರನ ಪ್ಲಾಸ್ಟಿಕ ಕೊಡದಲ್ಲಿ 10 ಲೀಟರನಷ್ಟು ಸೇಂದಿ ಸಿಕ್ಕಿರುತ್ತವೆ. ನಂತರ ಸಿಕ್ಕ ವಸ್ತುಗಳನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಸೇಂದಿಯನ್ನು 1 ಲೀಟರ ಬಾಟಲಿಯಲ್ಲಿ ಪ್ರತ್ಯೇಕವಾಗಿ ಸೀಲ ಮಾಡಿ ಮಧ್ಯಾಹ್ನ 3.20 ರಿಂದ 4.20 ರವರೆಗೆ ಚಾಸಾ-1ರವರು ಜಪ್ತಿ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿಗಳನ್ನು ಪಡೆದಿರತ್ತಾರೆ.

ನಂತರ ಘಟನೆ ಬಗ್ಗೆ ನಾನು, ಚಾಸಾ-5 ಮತ್ತು 6ರವರು ಚಾಸಾ-9ರವರಿಗೆ ಹೇಳಿಕೆಗಳನ್ನು

ನೀಡಿರುತ್ತೇನೆ.

ಈಗ ನೋಡುತ್ತಿರುವ ಬಾಟಲಿಯಲ್ಲಿ ಸೇಂದಿಯನ್ನು ಸೀಲ್ ಮಾಡಲಾಗಿತ್ತು. ಸದರಿ ಬಾಟಲಿಯನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SPR ವಕೀಲರಿಂದಃ**

ಉಕ್ಕಡ ಪೋಲಿಸ ಠಾಣೆಯಲ್ಲಿ ನಾನು 2016 ರಿಂದ 2021 ರವರೆಗೆ ಕೆಲಸ ಮಾಡಿದ್ದೇನೆ. ಉಕ್ಕಡ ಪೋಲಿಸ ಠಾಣೆಯಲ್ಲಿ ವಿಸಿಟರ ರೇಜಿಸ್ಟರ ಇದೆ ಎಂದರೆ ಸರಿ. ಚಿಂಚೋಳಿ ಪೋಲಿಸ ಠಾಣೆಯಲ್ಲಿ ಕೇಸ್ ಡೈರಿ ಇರುತ್ತದೆ ಎಂದರೆ ಸರಿ. ಆ ದಿನ ನನ್ನ ಕರ್ತವ್ಯ ಬೆಳಗ್ಗೆ 8 ರಿಂದ ಮಧ್ಯಾಹ್ನ 2 ಗಂಟೆವರೆಗೆ ಇತ್ತು. ನಂತರದ ಕರ್ತವ್ಯ ಚಾಸಾ-5ರವರದು ಇತ್ತು. ಆ ದಿನ ಚಾಸಾ-1ರವರು ವಿಸಿಟರ ರೇಜಿಸ್ಟರನಲ್ಲಿ ಬರೆದಿದ್ದಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆ ದಿನ ನಾವು ಪೋಲಿಸ ಠಾಣೆಯಲ್ಲಿ ನಾನು ಮತ್ತು ಚಾಸಾ-5ರವರು ಇದ್ದೇವೆ. ನಾನು ಮತ್ತು ಚಾಸಾ-5ರವರು ಬಿಟ್ಟು ಪೋಲಿಸ ಠಾಣೆಯಲ್ಲಿ ಬೇರೆ ಯಾರು ಇರಲಿಲ್ಲ. ನಾನು ಚಾಸಾ-2 ಮತ್ತು 3ರವರಿಗೆ ಕರೆಸಿದ್ದೇನೆ. ಚಾಸಾ-2 ಮತ್ತು 3ರವರು ನನಗೆ ಪರಿಚಯವಿದ್ದಾರೆ ಎಂದರೆ ಸರಿ. ನಮ್ಮ ಠಾಣೆಯಿಂದ ಘಟನಾ ಸ್ಥಳಕ್ಕೆ ಹೋಗಲು 20 ರಿಂದ 30 ನಿಮಿಷ ಬೇಕಾಗುತ್ತದೆ. ಆ ದಿನ ನಾವು ಸ್ಥಳಕ್ಕೆ ಸರಕಾರಿ ವಾಹನದಲ್ಲಿ ಹೋಗಿರುತ್ತೇವೆ. ಸದರಿ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ನನ್ನ ಹೇಳಿಕೆಯಲ್ಲಿ ಜೀಪಿನ ಸಂಖ್ಯೆ ಉಲ್ಲೇಖವಿದೆ.

ನನ್ನ ಹೇಳಿಕೆಯನ್ನು ನಾನು ಓದಿದ್ದೇನೆ. ಅದರಲ್ಲಿರುವ ಸಂಗತಿಗಳು ಸರಿ ಇರುತ್ತವೆ. ಘಟನಾ ಸ್ಥಳದ ಹತ್ತಿರ ದಾಬಾ, ಶಾಲೆ ಹಾಗೂ ಅಂಗಡಿಗಳು ಇವೆ ಎಂದರೆ ಸರಿ. ಕರ್ತವ್ಯಕ್ಕೆ ಇದ್ದಾಗ ಘಟನಾ ಸ್ಥಳಕ್ಕೆ ಆಗಾಗ ಹೋಗುತ್ತಾ ಇರುತ್ತೇವೆ. ಘಟನೆ ನಡೆಯುವ ಮೊದಲು ಕೃತ್ಯದ ಬಗ್ಗೆ ನನಗೆ ಯಾರು ಮಾಹಿತಿ ನೀಡಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಬಸ್ ನಿಲ್ದಾಣದ ಹತ್ತಿರ ಬಹಳಷ್ಟು ಜನರು ಇರುತ್ತಾರೆ ಎಂದರೆ ಸರಿ. ಸದರಿ ಬಸ್ ನಿಲ್ದಾಣದಿಂದ ಅಂದಾಜು 100 ಮೀಟರ ದೂರದಲ್ಲಿ ಘಟನಾ ಸ್ಥಳ ಇರುತ್ತದೆ. ಘಟನಾ ಸ್ಥಳಕ್ಕೆ ಹೋಗುವ ಮೊದಲು ಶಾಲೆಯ ಮುಂದೆ ರಸ್ತೆಯಲ್ಲಿ ವಾಹನವನ್ನು ನಿಲ್ಲಿಸಿರುತ್ತೇವೆ. ಆ ದಿನ ಚಾಸಾ-1ರವರು ಪೋಲಿಸ ವರದಿಯಲ್ಲಿದ್ದರು ಹಾಗೂ ನಾನು ಮಫ್ತಿಯಲ್ಲಿದ್ದೆ. ಘಟನಾ ಸ್ಥಳದಲ್ಲಿ ಸೇಂದಿ ಖರೀದಿ ಮಾಡುವವರು ಇರಲಿಲ್ಲ. ಆರೋಪಿಯಿಂದ ಯಾವುದೇ ಹಣ ಸಿಕ್ಕಿರುವುದಿಲ್ಲ. ಆರೋಪಿ ಅಲ್ಲಿಂದ ಓಡಿ ಹೋಗಲು ಪ್ರಯತ್ನ ಪಟ್ಟಿಲ್ಲ. ಕೊಡದ ಬಣ್ಣ ನನಗೆ ನೆನಪಿಲ್ಲ. ಮು.ಮಾ-1 ರ ಮೇಲೆ ಮೇತ್ತಿರುವ ಚೀಟಿಯ ಮೇಲೆ ಪಂಚರ ಸಹಿ ಇರುವುದಿಲ್ಲ. ಆ ದಿನ ಪಂಚರು ಬಾಟಲಿನ ಮೇಲೆ ಹಾಗೂ ಪಂಚನಾಮೆಯ ಮೇಲೆ ಸಹಿ ಮಾಡಿರುತ್ತಾರೆ.

ಆ ದಿನ ಚಾಸಾ-1ರವರು ವಾಹನದಲ್ಲಿ ಗಣಕಯಂತ್ರ ಮತ್ತು ಪ್ರಿಂಟರನ್ನು ತೆಗೆದುಕೊಂಡು ಹೋಗಿಲ್ಲ. ಜಪ್ತಿ ಪಂಚನಾಮೆಯನ್ನು ಚಾಸಾ-1ರವರು ಕೈಯಿಂದ ಬರೆದು ಸದರಿ ದಾಖಲೆಯಲ್ಲಿ ಪಂಚರ ಸಹಿಗಳನ್ನು ಪಡೆದು ಮರಳಿ ಠಾಣೆಗೆ ಬಂದು ಕಂಪ್ಯೂಟರನಲ್ಲಿ ಟೈಪ ಮಾಡಿ ಪ್ರಿಂಟ ಪಡೆದು ಪಂಚರ ಸಹಿಗಳನ್ನು ಪುನಃ

ಪಡೆದಿರುತ್ತಾರೆ.

ಆರೋಪಿ ಜೆಸಿಬಿ ಚಾಲಕನಿದ್ದಾನೆ ಮತ್ತು ಮೊದಲಿನಿಂದ ನನಗೆ ಪರಿಚಯವಿದ್ದಾನೆ ಎಂದರೆ ಸರಿ. ಪ್ರತಿ ವರ್ಷ 1ನೇ ಜನೇವರಿಯಂದು ಸಲಗರಭಸಂತಪುರ ಗ್ರಾಮದಲ್ಲಿ ಜಾತ್ರೆ ನಡೆಯುತ್ತದೆ ಎಂದರೆ ಸರಿ. ಆರೋಪಿ ಜಾತ್ರೆಯಲ್ಲಿ ಆಕ್ಷೇಪ ಮಾಡಬಾರದು ಎಂದು ನಾವು ಆರೋಪಿತ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ವಸ್ತು ಜಪ್ತಿ ಮಾಡದೇ ಇದ್ದರು ಸಹ ಠಾಣೆಯಲ್ಲಿ ಕುಳಿತು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**